# ನಿಮ್ಮೊಡನೆ

## ‘ವಿಶೇಷ’ ಸಾಲದು, ‘ಸಮಾನ’ ಬೇಕು

> ರೈತರು, ಕುಶಲಕರ್ಮಿಗಳು, ಮಹಿಳಾ ಉದ್ಯಮಿಗಳನ್ನು ಲೇವಾದೇವಿದಾರರ ಕಪಿಮುಷ್ಟಿಯಿಂದ ಪಾರು ಮಾಡಬೇಕಾದರೆ ಸಹಕಾರ ಸಂಘಗಳನ್ನು ಬಲಪಡಿಸುವುದು ಅಗತ್ಯ. ರಾಜ್ಯದಲ್ಲಿ 36 ಸಾವಿರಕ್ಕೂ ಮಿಕ್ಕಿ ಸಹಕಾರಿ ಸಂಘಗಳಿವೆ. ಬಹುಪಾಲು ಸಹಕಾರಿ ಸಂಘಗಳಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿದೆ. ರಾಜಕೀಯ ಹಸ್ತಕ್ಷೇಪವೂ ಮಿತಿಮೀರಿದೆ.




ಸಹಕಾರಿ ಸಂಘಗಳ ಕಾಯ್ದೆಗೆ ತಿದ್ದುಪಡಿ ತಂದು ಮಹಿಳೆಯರಿಗೆ ‘ವಿಶೇಷ’ ಮೀಸಲಾತಿ ಕಲ್ಪಿಸಲು ಚಿಂತನೆ ನಡೆದಿದೆ ಎಂದು ಮುಖ್ಯಮಂತ್ರಿ ಜಗದೀಶ ಶೆಟ್ಟರ್ ಅವರು ಪ್ರಕಟಿಸಿದ್ದಾರೆ. ಗ್ರಾಮ, ತಾಲ್ಲೂಕು, ಜಿಲ್ಲಾ ಪಂಚಾಯ್ತಿಗಳಲ್ಲಿ ಈಗಾಗಲೇ ಜಾರಿಯಲ್ಲಿರುವ ಶೇ.33ರ ಮಹಿಳಾ ಮೀಸಲನ್ನು ಶೇ.50ಕ್ಕೆ ಹೆಚ್ಚಿಸಿ ಶಾಸನ ಸಭೆಯ ಅಂಗೀಕಾರ ಪಡೆದಿರುವ ರಾಜ್ಯ ಸರ್ಕಾರವು; ಪುರಸಭೆ, ನಗರಸಭೆಗಳಲ್ಲೂ ಶೇ.50ಕ್ಕೆ ಮಹಿಳಾ ಮೀಸಲಾತಿಯನ್ನು ಹೆಚ್ಚಿಸಿ ಮುಂದಿನ ಅಧಿವೇಶನದಲ್ಲಿ ಅನುಮೋದನೆ ಪಡೆಯಲಿದೆ ಎಂದೂ ಅವರು ಇದೇ ಉಸಿರಿನಲ್ಲಿ ಹೇಳಿದ್ದಾರೆ. ಅಲ್ಲಿಗೆ ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಗೆ ಮೀಸಲಾತಿ ನೀಡುವಲ್ಲಿ ರಾಜ್ಯವು ದೇಶದ ಮುಂಚೂಣಿ ರಾಜ್ಯಗಳ ಪೈಕಿ ಒಂದಾದಂತಾಗುತ್ತದೆ. ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಗೆ ಸಮಭಾಗ ಮೀಸಲಾತಿ ನೀಡಲಿರುವ ರಾಜ್ಯವು, ಸಹಕಾರಿ ಸಂಘಗಳಲ್ಲೂ ಅದೇ ಕ್ರಮ ಕೈಗೊಂಡರೆ ಸಮಾನ ಅಭಿವೃದ್ಧಿ ಸಾಧಿಸುವ ಪಥದಲ್ಲಿ ಮುನ್ನಡೆಯಬಹುದು.

ರೈತರು, ಕುಶಲಕರ್ಮಿಗಳು, ಮಹಿಳಾ ಉದ್ಯಮಿಗಳನ್ನು ಲೇವಾದೇವಿದಾರರ ಕಪಿಮುಷ್ಟಿಯಿಂದ ಪಾರು ಮಾಡಬೇಕಾದರೆ ಸಹಕಾರ ಸಂಘಗಳನ್ನು ಬಲಪಡಿಸುವುದು ಅಗತ್ಯ. ರಾಜ್ಯದಲ್ಲಿ 36 ಸಾವಿರಕ್ಕೂ ಮಿಕ್ಕಿ ಸಹಕಾರಿ ಸಂಘಗಳಿವೆ. ಬಹುಪಾಲು ಸಹಕಾರಿ ಸಂಘಗಳಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿದೆ. ರಾಜಕೀಯ ಹಸ್ತಕ್ಷೇಪವು ಮಿತಿಮೀರಿದೆ. ಆಡಳಿತ ಮಂಡಳಿಯ ಕೆಲ ಸದಸ್ಯರು ಸಿಬ್ಬಂದಿಯ ಜೊತೆಗೂಡಿ ಠೇವಣಿ ಹಣವನ್ನೇ ಬೇನಾಮಿ ಹೆಸರಿನಲ್ಲಿ ಲಕ್ಷಾಂತರ ರೂ. ಸಾಲ ನೀಡಿ ಸಂಪೂರ್ಣ ಮುಳುಗಲು ಕಾರಣವಾಗಿರುವುದರಿಂದ, ಹಾಲಿ ಕ್ರಿಯಾಶೀಲವಾಗಿರುವುದು 27 ಸಾವಿರ ಸಹಕಾರಿ ಸಂಘಗಳು ಮಾತ್ರ.

ಸಹಕಾರಿ ಸಂಘಗಳ ಪುನಶ್ಚೇತನದ ಉದ್ದೇಶಗಳನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹೊಂದಿದ್ದರೂ, ಅವು ಶಿಫಾರಸು ಮಟ್ಟದಲ್ಲೇ ಉಳಿದಿವೆ. ಸಹಕಾರ ಸಂಘಗಳ ಪುನಶ್ಚೇತನಕ್ಕಾಗಿ ಕೇಂದ್ರ ಹಣಕಾಸು ಸಚಿವ ಚಿದಂಬರಂ ಅವರು ವೈದ್ಯನಾಥನ್ ಸಮಿತಿ ನೇಮಿಸಿದರು. ಆದರೆ ಸಮಿತಿ ಶಿಫಾರಸುಗಳು ನೆನೆಗುದಿಗೆ ಬಿದ್ದಿವೆ. ರಾಜ್ಯ ಸರ್ಕಾರ 2006ರಲ್ಲಿ ನೇಮಿಸಿದ್ದ ಬಿ.ಎಸ್.ವಿಶ್ವನಾಥನ್ ಸಮಿತಿಯು ಸಹಕಾರಿ ಸಂಘಗಳಲ್ಲಿ ಸರ್ಕಾರಿ ನಿಯಂತ್ರಣಕ್ಕೆ ಕಡಿವಾಣ ಹಾಕಬೇಕು, ನಾಮಕರಣ ಸದಸ್ಯರು ಬೇಡ ಎಂದು ಸಲಹೆ ನೀಡಿತು. ರಾಜಕೀಯ ಹಸ್ತಕ್ಷೇಪದಿಂದ ಮುಕ್ತಗೊಳಿಸುವ ಕುರಿತು ಬಹುತೇಕ ಸಲಹೆಗಳು ಬಂದಿವೆ. ಆದರೆ ಅನುಷ್ಠಾನ ಮಾತ್ರ ಶೂನ್ಯ.

ಸಹಕಾರಿ ಸಂಘಗಳ ಬಗ್ಗೆ ಇರುವ ಮತ್ತೊಂದು ಆರೋಪ ಎಂದರೆ ಕೆಲವು ವರ್ಗಗಳಿಗೆ ಮಾತ್ರ ಅದರಿಂದ ಹೆಚ್ಚಿನ ಪ್ರಯೋಜನ ಇದೆ ಎಂಬುದು. ಈ ಕಾರಣಕ್ಕೆ ಸಮಾಜದ ಎಲ್ಲ ವರ್ಗದವರನ್ನು ಸಹಕಾರಿ ಸಂಘಗಳ ಪಾಲುದಾರರಾಗಿಸಲು, ಒಳ ಮೀಸಲು ಸಲಹೆಯನ್ನು ಮಾಜಿ ಸಹಕಾರ ಸಚಿವ ಎಚ್.ವಿಶ್ವನಾಥ್ ಅವರು ಮುಂದಿಟ್ಟಿದ್ದರು. ಆದರೆ ಎಸ್.ಎಂ.ಕೃಷ್ಣ ನೇತೃತ್ವದ ಸರ್ಕಾರವು ಅದನ್ನು ನೆನೆಗುದಿಗೆ ತಳ್ಳಿತು.

ಸಹಕಾರಿ ಸಂಘಗಳನ್ನು ರಾಜಕೀಯ ಹಸ್ತಕ್ಷೇಪ ಹಾಗೂ ಭ್ರಷ್ಟಾಚಾರ ಮುಕ್ತವಾಗಿಸ ಬೇಕಾದರೆ ಮಹಿಳೆಯರು ಈ ಚಳವಳಿಯಲ್ಲಿ ಹೆಚ್ಚು ಪಾಲ್ಗೊಳ್ಳಬೇಕು. ಮಹಿಳೆಯರು ಪುರುಷರಿಗಿಂತ ಹೆಚ್ಚು ಪ್ರಾಮಾಣಿಕರು ಹಾಗೂ ನಿಷ್ಠಾವಂತರು. ಮಹಿಳೆಯ ಸ್ವಾವಲಂಬನೆಗೆ ರೂಪುಗೊಂಡ ಸ್ತ್ರೀಶಕ್ತಿ ಸಂಘಗಳ ಮೂಲಕ ಹಲವು ಕಡೆ ಅದನ್ನೀಗಾಗಲೇ ಸಾಧಿಸಿ ತೋರಿಸಿದ್ದಾರೆ. ಸ್ಥಳೀಯ ಸಂಸ್ಥೆಗಳಲ್ಲಿ ಪುರುಷರಿಗೆ ಸರಿಸಾಟಿಯಾದ ಪ್ರಾತಿನಿಧ್ಯ ನೀಡ ಹೊರಟಿರುವುದು ಸರಿಯಾದ ಕ್ರಮ. ಚುನಾಯಿತ ಮಹಿಳಾ ಪ್ರತಿನಿಧಿಗಳ ಕಾರ್ಯದಲ್ಲಿ ಅವರ ‘ಪತಿದೇವರು’ ಹಸ್ತಕ್ಷೇಪ ಮಾಡಿದ ಉದಾಹರಣೆಗಳು ಸಾಕಷ್ಟಿರಬಹುದು. ಅದರರ್ಥ ಮಹಿಳೆಯರು ಅನರ್ಹರೆಂದೇನಲ್ಲ. ಮಹಿಳೆಯೇ ಸ್ವತಂತ್ರವಾಗಿ ಕಾರ್ಯ ನಿರ್ವಹಿಸಬಲ್ಲಳು ಎಂಬ ಮನೋಭಾವ ಪುರುಷನಲ್ಲಿ ಬರುವುದು, ಅವನ ಏಳಿಗೆಯ ದೃಷ್ಟಿಯಿಂದಲೂ ಅವಶ್ಯಕ.

ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಗೆ ಸಲ್ಲಬೇಕಾಗಿರುವ ಪಾಲನ್ನು ನೀಡಲು ತುದಿಗಾಲಲ್ಲಿರುವ ಸರ್ಕಾರ, ಬಹುದೊಡ್ಡ ಹಣದ ವಹಿವಾಟಿನ ಸಹಕಾರಿ ಸಂಘಗಳಲ್ಲೂ ಮಹಿಳೆಯರನ್ನೂ ಸಮ ಪ್ರಮಾಣದಲ್ಲಿ ತೊಡಗಿಸಿಕೊಂಡರೆ, ನಮ್ಮ ಆರ್ಥಿಕ ಚಿತ್ರವೇ ಬದಲಾಗಲಿದೆ. ಎಲ್ಲ ವರ್ಗಕ್ಕೂ ಸಹಕಾರಿ ಸಂಘಗಳ ಲಾಭ ದೊರೆಯಬೇಕಾದರೆ ಒಳ ಮೀಸಲಾತಿ ಒಳಗೊಂಡ ಮಹಿಳಾ ಮೀಸಲಾತಿ ಆದಷ್ಟು ಶೀಘ್ರ ಅನುಷ್ಠಾನಗೊಳ್ಳುವುದು ಅಪೇಕ್ಷಣೀಯ ಅಷ್ಟೇ ಅಲ್ಲ, ಅತಿ ಅಗತ್ಯ ಕೂಡ.

ಇತಿಹಾಸದಲ್ಲಿ ಮೊದಲಿಗೆ ಮಹಿಳಾ ಸಮಾನತೆ ಪ್ರತಿಪಾದಿಸಿದವರು 12ನೇ ಶತಮಾನದ ವಚನಕಾರರು. ಅವರು ಶುರುಮಾಡಿದ ಪ್ರಕ್ರಿಯೆ ಮುಂದೆ ಸ್ಥಗಿತಗೊಂಡದ್ದೇ ಹೆಚ್ಚು. ಮಹಿಳಾ ಸಮಾನತೆಯಂತಹ ಉದಾತ್ತ ಧ್ಯೇಯ ಹೊಂದಿದ ನಾಡಿನ ವಾರಸುದಾರರಾಗಬೇಕಾದರೆ ಸಹಕಾರಿ ಸಂಘಗಳಲ್ಲಿ ಮಹಿಳೆಗೆ ಒಂದೆರಡು ಸಂಖ್ಯೆಯ ‘ವಿಶೇಷ’ ಸ್ಥಾನ ಮಾತ್ರವಲ್ಲ, ಪುರುಷರಿಗೆ ‘ಸಮಾನ’ ಪ್ರಾತಿನಿಧ್ಯ ಬೇಕು.

■ ಗುಡಿಹಳ್ಳಿ ನಾಗರಾಜ